ದಿನಾಂಕ 24-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎನ್.ಎಚ್. ವಕೀಲರಿಂದಃ

09. ನನ್ನ ವ್ಯವಹಾರ 2013 ರಲ್ಲಿ ಅಂಗಡಿ ವ್ಯವಹಾರ ಆಗಿತ್ತು. ನನ್ನ ಹೆಸರಿನಲ್ಲಿ ಜಾಗೃತಿ ಎಂಟರ್ಪ್ರೈಸಸ್ ಎಂಬ ಅಂಗಡಿ ಇತ್ತು. ಆ ವ್ಯವಹಾರಕ್ಕೆ ಪರವಾನಿಗೆ ಪಡೆದಿರುತ್ತೇನೆ. ನಾನು ಆ ಅಂಗಡಿಯನ್ನು ನಡೆಸುತ್ತಿದ್ದೆ ಎಂದು ನನ್ನ ವಕೀಲರಿಗೆ ಹೇಳಿ ಬರೆಸಿಲ್ಲ ಎಂದರೆ ಸರಿ. ಸದ್ರಿ ಅಂಗಡಿಯಲ್ಲಿ 2013 ರಲ್ಲಿ ದಿನಕ್ಕೆ ರೂ.6-7 ಸಾವಿರ ವ್ಯವಹಾರ ಆಗುತ್ತಿತ್ತು. ನನ್ನ ಪ್ರಕಾರ ಅದರಲ್ಲಿ ನಾನು ಒಬ್ಬನೇ ಕೆಲಸ ಮಾಡುತ್ತಿದ್ದೆ. ನನಗೆ ಆ ವ್ಯವಹಾರದಲ್ಲಿ ದಿನಕ್ಕೆ ರೂ.1,500/- ಲಾಭ ಬರುತ್ತಿತ್ತು. ರೂ.250/- ರಷ್ಟು ದಿನಕ್ಕೆ ಖರ್ಚು ಇರುತ್ತಿತ್ತು. ನನ್ನ ಹೆಂಡತಿಯ ಹೆಸರು ಸೀಮಾ ಇರುತ್ತದೆ ಎಂದರೆ ಸರಿ. 2013 ರಲ್ಲಿ ನಾನು ನನ್ನ ಹೆಂಡತಿಯ ಹೆಸರಿನಲ್ಲಿ ಸುಪ್ರಭಾತ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಾಲ ಮಾಡಿದ್ದೆ ಎಂದರೆ ಸರಿ. ಅದೇ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿ ಕೂಡ ಅದೇ ವರ್ಷ ಸಾಲ ಮಾಡಿದ್ದೇನೆ ಎಂದರೆ ಸರಿ. ನಾನು ಹಾಗೂ ನನ್ನ ಹೆಂಡತಿ ಮಾಡಿರುವ ಆ ಸಾಲಗಳು ಮಾರ್ಚ್ 2013 ರಲ್ಲಿ ಮಾಡಿರುವ ಸಾಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆ ಸಾಲಗಳನ್ನು ಪಾವತಿಸದೆ ನನ್ನ ಹಾಗೂ ನನ್ನ ಹೆಂಡತಿಯ ವಿರುದ್ದ ಸಾಲ ವಸೂಲಿ ಬಗ್ಗೆ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿ ಆ ಸಾಲಗಳನ್ನು ಭರಣ ಮಾಡಿದ್ದು, ತದನಂತರ ಪಡೆದ ಸಾಲದ ಬಗ್ಗೆ ಚೆಕ್ ಬೌನ್ಸ್ ಪ್ರಕರಣ ದಾಖಲಾಗಿದೆ ಎಂದು ನುಡಿಯುತ್ತಾರೆ. ಆ ಪ್ರಕರಣಕ್ಕೆ ಸಂಬಂಧಪಟ್ಟ ಸಾಲದ ಬಾಬ್ತು ಜ್ಯಾರಿ ಅರ್ಜಿ ಕೂಡ ಅವರು ಸಲ್ಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿ 2019 ರಿಂದ ಚಾಲ್ತಿ ಇದೆ ಎಂದು ನುಡಿಯುತ್ತಾರೆ. 2013 ರಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಪಡೆದ ಆ ಸಾಲ ಎಷ್ಟು ಮೊತ್ತದ ಸಾಲ ಎಂದು ನೆನಪಿಲ್ಲ. ನಾನು ಪಡೆದ ಸಾಲ ರೂ.3 ಲಕ್ಷ ಆಗಿರುತ್ತದೆ. ಸಾಕ್ಷಿ ಸ್ವತಹ ಆ

ಸಾಲ ಪಾವತಿಸಿ ತದನಂತರ 2019 ಕ್ಕೆ ಸ್ವಲ್ಪ ಮುಂಚೆ ರೂ.7 ಲಕ್ಷ ಸಾಲ ಪಡೆದಿದ್ದೇನೆ ಎಂದು ನುಡಿಯುತ್ತಾರೆ.

10. 2013 ರಲ್ಲಿ ಪಡೆದ ಸಾಲದ ಕಂತನ್ನು ಮತ್ತು ಬಡ್ಡಿಯನ್ನು ಸರಿಯಾಗಿ ಪಾವತಿಸದೆ ತದನಂತರ ಅದನ್ನು ರಿನಿವಲ್ ಮಾಡಿಕೊಂಡಿರುವುದು ಎಂದರೆ ಸಾಕ್ಷಿ ಆ ಸಾಲ ಪಾವತಿಸಿ ತದನಂತರ ಅಂಗಡಿ ಬೆಳವಣಿಗೆಗೆ ಪಡೆದ ಸಾಲ ಕೋವಿಡ್ ಬಂದ ನಂತರ ವ್ಯಾಪಾರ ಸರಿಯಾಗಿ ನಡೆಯದೆ ಬಾಕಿ ಉಳಿಯಿತು ಎಂದು ನುಡಿಯುತ್ತಾರೆ. ನನ್ನ ನೋಟಿಸ್ ಮತ್ತು ಪಿರ್ಯಾದಿನಲ್ಲಿ ಆ ರೀತಿ ಹೇಳಿಲ್ಲ ಎಂದರೆ ಸರಿ. ಆರೋಪಿಯ ಊರು ಕೊಡ್ಲಗದ್ದೆ ಹಾಗೂ ನನ್ನ ಊರು ಅಂಕೋಲಾ ಎಂದರೆ ಸರಿ. ಅಂಕೋಲಾದಿಂದ ಕೊಡ್ಲಗದ್ದೆಗೆ ಸುಮಾರು 60 ಕಿ.ಮಿ. ದೂರ ಎಂದರೆ ಇರಬಹುದು. ನನಗೆ 2 ಜನ ಮಕ್ಕಳು. ನನ್ನ ಕುಟುಂಬಕ್ಕೆ ಸಂಬಂಧಪಟ್ಟಂತೆ ಶಿರಕುಳಿ ಮನೆಯಲ್ಲಿ ಬಿ.ಪಿ.ಎಲ್. ಪಡಿತರ ಚೀಟಿ ಇದೆ ಎಂದರೆ ಸರಿ. ಆ ಪಡಿತರ ಚೀಟಿಯಲ್ಲಿ ನನ್ನ, ಹೆಂಡತಿ ಹಾಗೂ ನನ್ನ 2 ಜನ ಮಕ್ಕಳ ಹೆಸರಿದೆ ಎಂದರೆ ಸರಿ. 2013 ರಲ್ಲಿ ನನ್ನ ಮಕ್ಕಳ ವಿಧ್ಯಾಭ್ಯಾಸಕ್ಕೆ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಈಗ ನನ್ನ ದೊಡ್ಡ ಮಗಳು ಹಿಮಾಲಯ ಸ್ಕೂಲ್ ಅಂಕೋಲಾದಲ್ಲಿ 9 ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದಾಳೆ. ಆ ಶಾಲೆಗೆ ನನ್ನ ಆದಾಯ ಪ್ರಮಾಣಪತ್ರ ನೀಡಿಲ್ಲ.

11. ವಾರ್ಷಿಕ ಆದಾಯ ಪಟ್ಟಣದ ನಿವಾಸಿಗಳಿಗೆ ರೂ.22 ಸಾವಿರ ಹಾಗೂ ಹಳ್ಳಿ ನಿವಾಸಿಗಳಿಗೆ ರೂ.15 ಸಾವಿರ ವಾರ್ಷಿಕ ಆದಾಯ ಇದ್ದಾಗ ಬಿ.ಪಿ.ಎಲ್. ಪಡಿತರ ಚೀಟಿ ನೀಡುವುದು ಎಂದರೆ ಸರಿ.

ಕಂದಾಯ ನಿರೀಕ್ಷಕರು ಅರ್ಜಿ ಸಲ್ಲಿಸಿದಾಗ ಬಂದು ಪರಿಶೀಲನೆ ಮಾಡಿ ಆ ಆದಾಯ ಹೊಂದಿದ್ದಾರೆ ಎಂದು ವರದಿ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳಿ ನನ್ನಲ್ಲಿ ಯಾರು ಪರಿಶೀಲಿಸಲು ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆಯ ಪೂರ್ವದಲ್ಲೆ ಬಿ.ಪಿ.ಎಲ್. ಪಡಿತರ ಚೀಟಿ ಇತ್ತು ಎಂದರೆ ಸರಿ. ಈತನಕ ಆ ಪಡಿತರ ಚೀಟಿ ಮುಂದುವರೆದಿದೆ ಎಂದರೆ ಸರಿ. ಆ ಪಡಿತರ ಚೀಟಿಯಲ್ಲಿ ಸಿಗುವ ಅಕ್ಕಿ ಹಾಗೂ ರೂ.174/- ಪಡೆಯುತ್ತಿದ್ದೇನೆ ಎಂದರೆ ಸಾಕ್ಷಿ ಈಗ 2 ತಿಂಗಳಿಂದ ಪಡೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. 2013 ರಲ್ಲಿ 10 ಕೆ.ಜಿ. ಅಕ್ಕಿ, 2 ಕೆ.ಜಿ. ಗೋಧಿ ಮತ್ತು 2 ಲೀಟರ್ ಸೀಮೆಎಣ್ಣೆ ಪಡೆದಿದ್ದೆ ಎಂದರೆ ಸಾಕ್ಷಿ ಪಡೆದಿರಬಹುದು ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಮದುವೆ ಆದ ನಂತರ ಅರ್ಜಿ ಹಾಕಿ ತಿಂಗಳಿಗೆ ರೂ.22 ಸಾವಿರ ಆದಾಯ ಎಂದು ಹೇಳಿ ಆ ಪಡಿತರ ಚೀಟಿ ಮಾಡಿಸಿರುವುದು ಎಂದರೆ ಸಾಕ್ಷಿ ನಾನು ಅಂಗಡಿ ಹಾಕುವ ಹಿಂದೆ ಗೌಂಡಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಗ ಪಡಿತರ ಚೀಟಿ ಮಾಡಿಸಿರುವುದು ಹಾಗೂ ಆ ಪಡಿತರ ಚೀಟಿಯಲ್ಲಿ ನನ್ನ ಹೆಂಡತಿಯ ಹೆಸರು ಸೇರಿಸಿರುವುದು ಎಂದು ನುಡಿಯುತ್ತಾರೆ. 2013 ರಲ್ಲಿ ಅಂಗಡಿ ಪ್ರಾರಂಭಿಸಿದ್ದೇನೆ ಆದರೆ ಯಾವ ತಿಂಗಳಿನಿಂದ ಪ್ರಾರಂಭಿಸಿದೆ ಎಂದು ನೆನಪಿಲ್ಲ. ನನ್ನ ಮಕ್ಕಳು ಹುಟ್ಟಿದ 6 ತಿಂಗಳಲ್ಲಿ ಅವರುಗಳ ಹೆಸರುಗಳನ್ನು ಪಡಿತರ ಚೀಟಿಯಲ್ಲಿ ಸೇರಿಸಿದ್ದೇನೆ. ನನ್ನ ಒಬ್ಬ ಮಗಳ ವಯಸ್ಸು 14 ವರ್ಷ ಹಾಗೂ ಮಗನ ವಯಸ್ಸು 10 ವರ್ಷ. ನನ್ನ ಮಗ 2013 ರಲ್ಲಿ ಹುಟ್ಟಿದ್ದಾನೆ. ನನ್ನ ಮಕ್ಕಳ ಹೆಸರು ಪಡಿತರ ಚೀಟಿಯಲ್ಲಿ ಸೇರಿಸುವಾಗ ನನ್ನ ಆದಾಯ ಹೆಚ್ಚಾಗಿದೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಅವರು ಕೇಳಿಲ್ಲ ಹಾಗಾಗಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ಆದಾಯ ಹೆಚ್ಚಾಗಿರುವುದರಿಂದ ಬಿ.ಪಿ.ಎಲ್. ಕಾರ್ಡ್ ಹೊಂದಲು ಅರ್ಹನಲ್ಲ ಎಂದು ಹೇಳಿ ಅದನ್ನು ನಾನು ಸರಂಡರ್ ಮಾಡಿಲ್ಲ.

12. ನನ್ನ ಹೆಂಡತಿ ಕರ್ನಾಟಕ ಸರ್ಕಾರದ ತಿಂಗಳ ರೂ.2 ಸಾವಿರ ಗೃಹ ಲಕ್ಷ್ಮಿ ಯೋಜನೆ ಇಂದ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಬಿ.ಪಿ.ಎಲ್. ಪಡಿತರ ಚೀಟಿಯಲ್ಲಿ ನನ್ನ ಹೆಂಡತಿ ಮನೆ ಮುಖ್ಯಸ್ಥೆ ಎಂದು ಇದೆ ಎಂದರೆ ಸರಿ. ಮನೆ ಮುಖ್ಯಸ್ಥೆ ಎಂದು ಮಹಿಳೆಯ ಹೆಸರು ಪಡಿತರ ಚೀಟಿಯಲ್ಲಿ ಇದ್ದಾಗ ಆ ಹಣ ರೂ.2 ಸಾವಿರ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಬಿ.ಪಿ.ಎಲ್. ಪಡಿತರ ಚೀಟಿಯ ಅರ್ಹತೆಯಲ್ಲಿ ಬರುವುದರಿಂದ ಅದನ್ನು ಮುಂದುವರಿಸಿಕೊಂಡು ಬಂದಿರುವುದು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಯಾರು ಸಲಹೆ ನೀಡಲಿಲ್ಲ ಹಾಗೂ ಅದರ ಬಗ್ಗೆ ವಿಚಾರಣೆ ಮಾಡಿಲ್ಲ ಎಂದು ನುಡಿಯುತ್ತಾರೆ. ಅಂಗಡಿ ನಡೆಸಲು ಟಿನ್ ನಂಬರ್ ಪಡೆಯಬೇಕು ಎಂದರೆ ಸರಿ. ಆ ಟಿನ್ ನಂಬರ್ ಪಡೆಯಲು ಆದಾಯ ತೋರಿಸಿದಾಗ ಮಾತ್ರ ಕೊಡುತ್ತಾರೆ ಎಂದರೆ ಇರಬಹುದು. ವ್ಯಾಪಾರ ಮಾಡುವುದ್ಕೆ ನಿರ್ದಿಷ್ಟ ತೆರಿಗೆಯನ್ನು ಪಾವತಿಸಬೇಕು ಎಂದರೆ ಸರಿ. ಆದಾಯದ ಬಗ್ಗೆ ರಿಟರ್ನ್ಸ್ ಕೂಡ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. 2013 ರಲ್ಲಿ ನಾನು ಪರವಾನಿಗೆ ಹಾಗೂ ಟಿನ್ ನಂಬರ್ ಪಡೆದುಕೊಂಡಿಲ್ಲ. 2016 ರಿಂದ ಅವುಗಳನ್ನು ಪಡೆದಿರುತ್ತೇನೆ. ಇಲ್ಲಿ ಅಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು 2013 ರಲ್ಲಿ ಯಾವುದೇ ಜಾಗೃತಿ ಎಂಟರ್ ಪ್ರೈಸಸ್ ಎಂಬ ಅಂಗಡಿಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ನನಗೆ ದಿನಕ್ಕೆ ರೂ.1,500/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಆರೋಪಿಯ ಅಕ್ಕನ ಮನೆ ನನ್ನ ಮನೆಯ ಹತ್ತಿರ ಇರುವುದರಿಂದ 2009-10 ನೇ ಸಾಲಿನಿಂದ ಆರೋಪಿಯ ಪರಿಚಯವಾಯಿತು. ಆರೋಪಿ ಒಂದು ಸಲ ರೂ.10 ಸಾವಿರ ಹಾಗೂ ಇನ್ನೊಂದು ಸಲ ರೂ.20 ಸಾವಿರ ಸಾಲ ಪಡೆದು ವಾಪಸಾತಿ ಮಾಡಿರುತ್ತಾರೆ. ಅರೋಪಿ ಜಾಗ ಮಾರಾಟದ ಬಗ್ಗೆ

ಕರೆದುಕೊಂಡು ಹೋಗಿ ತೋರಿಸಿದ್ದು ಇದ್ದು, ಆದರೆ ಆ ವ್ಯವಹಾರ ನಡೆದಿಲ್ಲ. ಆ ರೀತಿ 3 ಸಾರಿ ಈ ಪ್ರಕರಣದಲ್ಲಿ ಹೇಳಿರುವ ಸಾಲಕ್ಕಿಂತ ಮುಂಚೆ ಜಮೀನು ತೋರಿಸಿದ್ದರು. ನಾನು ಅವರಿಗೆ ಯಾವುದೇ ಜಮೀನು ತೋರಿಸಿಲ್ಲ. ಆರೋಪಿ 11-08-2013 ರಂದು ಸಾಲ ಕೇಳಿದ್ದು, ನನ್ನಲ್ಲಿ ಆ ದಿನ ಇರಲಿಲ್ಲ, ಆದರೆ 15-08-2013 ರಂದು ಅವರಿಗೆ ಸಾಲ ನೀಡಿದೆ. ಆರೋಪಿ ಅಂಕೋಲಾ ಮಾರ್ಕೆಟ್ ನಲ್ಲಿ ಸಿಕ್ಕಿ ಸಾಲ ಕೇಳಿದ್ದರು. ಆ ಸಂದರ್ಭದಲ್ಲಿ ನಮ್ಮಿಬ್ಬರು ಬಿಟ್ಟು ಬೇರೆ ಯಾರು ಇರಲಿಲ್ಲ. ಎಷ್ಟು ಘಂಟೆಗೆ ಕೇಳಿದರು ಎಂದು ನೆನಪಿಲ್ಲ. ಆದರೆ ಮಧ್ಯಾಹ್ನ 11-12 ರ ನಡುವೆ ಇರಬಹುದು. ಆರೋಪಿಗೆ ಸಾಲ ಕೂಡ ಮಾರ್ಕೆಟ್ ನಲ್ಲೆ ನೀಡಿದೆ. ಆಗ ಅಲ್ಲಿ ಬೇರೆ ಯಾರು ಇರಲಿಲ್ಲ. ಆದರೆ ಸಾರ್ವಜನಿಕರು ಆಜುಬಾಜು ಇದ್ದರು. ನಾನು ಆತನಿಗೆ ಆ ಬಗ್ಗೆ ದಾಖಲೆ ನೀಡಲು ಕೇಳಿದ್ದೆ. ಆದರೆ ಆತ ಮುದ್ದಂ ವಾಪಸ್ಸು ಪಾವತಿಸುತ್ತೇನೆ ಹಾಗೂ ಚೆಕ್ ಬೇಕಾದರೆ ನೀಡಬಲ್ಲೆ ಎಂದು ಹೇಳಿದ್ದರು. ಆ ರೀತಿ ಹೇಳಿರುವುದು ಹಣ ಪಡೆದುಕೊಂಡಾಗ ಮಧ್ಯಾಹ್ನ 11-12 ಘಂಟೆ ಮಧ್ಯೆ ಇರಬಹುದು.

14. ಆ ದಿನ ನಿಪಿ-1 ಚೆಕ್ಕನ್ನು ಪಡೆದಿರುವುದಾ ಎಂದರೆ ಸಾಕ್ಷಿ ಸಾಲ ನೀಡಿದಾಗ ಚೆಕ್ ನೀಡಿಲ್ಲ ಆ ನಂತರ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಆ ನಂತರ ಆರೋಪಿ ಹಣನ್ನೂ ನೀಡಿಲ್ಲ ಚೆಕ್ಕು ನೀಡಿಲ್ಲ. ನಾನು ತುಂಬಾ ಒತ್ತಡ ಹಾಕಿ ಕೇಳಿದಾಗ 2 ತಿಂಗಳ ನಂತರ 22-10-2013 ರಂದು ಚೆಕ್ ನೀಡಿರುತ್ತಾರೆ. ಆ ಚೆಕ್ಕ್ ಅನ್ನು ಕೊಡುವಾಗ ನಾನು ಮತ್ತು ಅವರು ಮಾತ್ರ ಇದ್ದೆವು. ಆ ಚೆಕ್ಕನ್ನು ಕೂಡ ಮಾರ್ಕೆಟ್ ನಲ್ಲಿ ನೀಡಿರುತ್ತಾರೆ. ನನ್ನ ಪರಿಚಿತರು ಮಾರ್ಕೆಟ್ ನಲ್ಲಿ

ಇರುತ್ತಾರೆ ಎಂದರೆ ಇರಬಹುದು. ಹಣ ಕೇಳಿದಾಗ, ಸಾಲ ನೀಡಿದಾಗ ಹಾಗೂ ಚೆಕ್‌ಕ್ ನೀಡಿದಾಗ ನನ್ನ ಪ್ರಕಾರ ಬೇರೆ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ.

15. ಆರೋಪಿ ಹೆಚ್ಚಿನ ಶಿಕ್ಷಣ ಪಡೆದವರಲ್ಲ ಎಂದರೆ ಗೊತ್ತಿಲ್ಲ. ನಿಪಿ–1 ರಲ್ಲಿರುವ ಬರವಣಿಗೆಗಳನ್ನು ಯಾರು ಬರೆದರು ಎಂದು ಗೊತ್ತಿಲ್ಲ. ಆರೋಪಿ ಕೊಡ್ಲಗದ್ದೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2013 ರಿಂದ 15 ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾಗಿದ್ದರು ಎಂದರೆ ಗೊತ್ತಿಲ್ಲ. ಶಾಲೆಯಲ್ಲಿ ಆಗಸ್ಟ್ 15 ರಂದು ಸಂಜೆ 4 ಘಂಟೆಯ ತನಕ ಕಾರ್ಯಕ್ರಮ ಇರುತ್ತದೆ ಎಂದರೆ ಇರಬಹುದು. ಈ ಪ್ರಕರಣದಲ್ಲಿ ನನ್ನ ವಕೀಲರು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿದೆ. ಈ ಪ್ರಕರಣದಲ್ಲಿ ಆರೊಪಿಗೆ ಕಳುಹಿಸಿದ ನೋಟಿಸ್ ಜಾರಿಯಾಗಿದೇಯಾ ಎಂದು ನನ್ನ ವಕೀಲರನ್ನು ಕೇಳಿದ್ದೆ. ಸಾಕ್ಷಿ ಸ್ವತಹ ನೋಟಿಸ್ ಜಾರಿಯಾಗಿದೆ ಎಂದು ಹೇಳಿದ್ದರು. ಆರೋಪಿಗೆ 28–11–2013 ರಂದು ಜಾರಿ ಆಗಿದೆ ಎಂದು ತಿಳಿದುಕೊಂಡಿದ್ದೇನೆ. ಆರೋಪಿಗೆ 28–11–2013 ರಂದು ನೋಟಿಸ್ ಜಾರಿಯಾದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ವಕೀಲರಿಗೆ ಕೇಳಿದಾಗ ಅದು ಪರತ್ ಬಂದಿಲ್ಲ ಎಂದು ಹೇಳಿದಾಗ ಅಂಚೆ ಕಚೇರಿಗೆ ಅರ್ಜಿ ಕೊಟ್ಟು ಆ ಬಗ್ಗೆ ದಾಖಲೆ ಪಡೆದಿದ್ದೇವೆ ಎಂದು ನುಡಿಯುತ್ತಾರೆ. ನಿಪಿ–4 ರಲ್ಲಿ ಆರೋಪಿಗೆ ನೋಟಿಸ್ ಜಾರಿಯಾಗಿದೆ ಎಂದು ಹೇಳಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಯಾವುದೇ ನೋಟಿಸ್ ಜಾರಿಯಾಗಿಲ್ಲ ಎಂದರೆ ಸರಿಯಲ್ಲ.

16. ಆರೋಪಿ ನಿಪಿ-1 ಚೆಕ್ಕನ್ನು ದಿನಾಂಕ 22-10-2013 ರಂದು ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಸದ್ರಿ ಚೆಕ್ಕನ್ನು ಜಮೀನಿನ ಭದ್ರತೆಗಾಗಿ 2011 ರಲ್ಲಿ ನನ್ನ ಸ್ನೇಹಿತನಿಗೆ ನೀಡಿದ ಚೆಕ್ಕು ಎಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲುಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.